ಪೂರೈಸಲಾಗುತ್ತಿದ್ದ ಆಯಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಸಂಬಂಧಿಸಿದ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಫಲಾನುಭವಿಗಳನ್ನು ಆಯ್ಕೆ ಮಾಡಿ ನಿಗಮಕ್ಕೆ ಸಲ್ಲಿಸಬೇಕಿರುತ್ತದೆ ಇದರಿಂದ ಹೆಚ್ಚು ಕಾರತಮ್ಯ ಉಂಟಾಗುವುದಿಲ್ಲ

ಆ ಪ್ರತಿ ಗ್ರಾಮಗಳಲ್ಲಿ ಗರಿಷ್ಠ 300 ಮನೆಗಳವರೆಗೆ ಭಾಗ್ಯಜ್ಯೋತಿ ಕುಟೀರ ಜ್ಯೋತಿ ಯೋಜನೆ ಅಡಿ ವಿದ್ಯುತ್ ಪೂರೈಸಲು ಅವಕಾಶವಿರುತ್ತದೆ ಜನಸಂಖ್ಯೆ ಆಧಾರದ ಮೇಲೆ ಫಲಾನುಭವಿಗಳನ್ನು ಆಯ್ಕೆ ಮಾಡುವ ವದ್ಧತಿಯಿರುವುದಿಲ್ಲ

ಮೈಸೂರಿನ ಹೂಟಗಳ್ಳಿ ವಿದ್ಯುತ್ ಸಂಪರ್ಕ ಕೇಂದ್ರದಿಂದ ಕೊಡಗು ಜಿಲ್ಲೆಗೆ ವಿದ್ಯುತ್ ಪೂರೈಸಲು ರಿಸೀವಿಂಗ್ ಕೇಂದ್ರಸ್ಥಾಪನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 150(59)

**ಸದಸ್ಯರ ಹೆಸರು ಶ್ರೀ ಎಸವರಾಜು ಹೆಚ್ ಸಿ (ಪಿರಿಯಾಪಟ್ಟಣ)**

**ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ(ಇಂಧನ ರಾಜ್ಯ ಸಚಿವರು)**

## ಪ್ರಶ್ನೆ

ಅ ಮೈಸೂರಿನ ಹೂಟಗಳ್ಳಿ ವಿದ್ಯುತ್ ಸಂಪರ್ಕ ಕೇಂದ್ರದಿಂದ ಮೈಸೂರು ಜಿಲ್ಲೆ ಗಡಿಭಾಗಕ್ಕೆ ಮತ್ತು ಕೊಡಗು ಜಿಲ್ಲೆಗೆ ಸಮರ್ಪಕ ವಿದ್ಯುತ್ ಪೂರೈಸಲು ಕುಶಾಲನಗರ ಸಮೀಪ 220 ಕೆ ವಿ ರಿಸೀವಿಂಗ್ ಕೇಂದ್ರ ತೆರೆಯುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ?

ಆ ಹಾಗಿದ್ದಲ್ಲಿ ಯಾವ ಸ್ಥಳದಲ್ಲಿ ಈ ಕೇಂದ್ರವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ ಮತ್ತು ಎಂದಿನಿಂದ ಪ್ರಾರಂಭಿಸಲಾಗುವುದು?

## ಉತ್ತರ

ಅ ಹೌದು ಇದೆ

ಆ ಕುಶಾಲನಗರದ ಸಮೀಪ ಒಂದು 220 ಕ ವಿ ರಿಸೀವಿಂಗ್ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಇದೆ ಈ ಪ್ರಸ್ತಾವನೆಗೆ ನಿಗಮದ ತಾಂತ್ರಿಕ ಸಮಿತಿಯು ಅಕ್ಟೋಬರ್ 2001ರಲ್ಲಿ ತನ್ನ ಅನುಮೋದನೆಯನ್ನು ನೀಡಿರುತ್ತದೆ ಈ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ನಿಗಮ ಕಛೇರಿಯ ಆಡಳಿತಾತ್ಮಕ ಮಂಜೂರಾತಿ

ದೊರೆತ ನಂತರ ನಿರ್ಮಾಣ ಕಾರ್ಯದ ಬಗ್ಗೆ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು

ವಿದ್ಯುತ್ ಸಂಪರ್ಕಗಳಿಗೆ ಅರ್ಜಿಗಳ ಸ್ವೀಕಾರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 151(83)

**ಸದಸ್ಯರ ಹೆಸರು ಶ್ರೀ ಸದಾನಂದಗೌಡ ಡಿ ವಿ (ಪುತ್ತೂರು)**

**ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಆ ಪಾಟೀಲ್(ಇಂಧನ ರಾಜ್ಯ ಸಚಿವರು)**

## ಪ್ರಶ್ನೆ

ಅ) ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಐಪಿ ಸೆಟ್ ವಿಭಾಗಗಳಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು ವರ್ಷವಾರು ಮಾಹಿತಿ ನೀಡುವುದು

ಆ) ಅವುಗಳ ವೈಕಿ ಎಷ್ಟು ಅರ್ಜಿದಾರರಿಗೆ ಸಂಪರ್ಕಗಳನ್ನು ಒದಗಿಸಲಾಗಿದೆ ಮತ್ತು ಉಳಿದ ಅರ್ಜಿದಾರರಿಗೆ ಸಂಪರ್ಕಗಳನ್ನು ಎಂದು ನೀಡಲಾಗುವುದು?

ಇ) ರಾಜ್ಯದಲ್ಲಿ ಕಾರ್ಯದೇಶವಾಗಿ ಸಾಮಗ್ರಿಗಳ ಲಭ್ಯತೆ ಇಲ್ಲದೆ ಸಂವರ್ಕ ಒದಗಿಸಲಾಗದೇ ಇರುವ ಒಟ್ಟು ಪ್ರಕರಣಗಳೆಷ್ಟು ವಿಭಾಗವಾರು ಬಾಕಿ ಅರ್ಜಿಗಳೆಷ್ಟು ವಿವರ ನೀಡುವುದು (ವಿಭಾಗವಾರು ಅಂದರೆ ಐಪಿ ಸೆಟ್ಟು ಗ್ರಹ ಕೈಗಾರಿಕೆ ಹೀಗೆ ವಿವರ ನೀಡುವುದು?

## ಉತ್ತರ

ಅ) ಕಳೆದ ಮೂರು ವರ್ಷಗಳಲ್ಲಿ ಐ ಪಿ ಸೆಟ್ಟುಗಳ ವಿದ್ಯುತ್ ಸಂವರ್ಕಕ್ಕಾಗಿ ಕೋರಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ 1,84,415 ಇವುಗಳ ವರ್ಷವಾರು ಮಾಹಿತಿ ಈ ಕೆಳಕಂಡಂತಿದೆ

| ವರ್ಷ | ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ |
|---|---|
| 1998-1999 | 55245 |
| 1999-2000 | 65397 |